# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 999 (1244) |
| ಸದಸ್ಯರ ಹೆಸರು | : | ಶ್ರೀ ಕುಶಾಲಪ್ಪ ಎಂ.ಪಿ. (ಸುಜಾ)<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 07.03.2022 |
| ಉತ್ತರಿಸುವವರು | : | ಅರಣ್ಯ, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕಳೆದ 03 ವರ್ಷಗಳಿಂದ ಸಾರ್ವಜನಿಕರಿಗೆ ಕೊಡಗು ಜಿಲ್ಲೆಯಲ್ಲಿ ಹುಲಿ ದಾಳಿಯಿಂದ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಳ್ಳಲಾಗಿದೆ; (ಸಂಪೂರ್ಣ ವಿವರ ನೀಡುವುದು) | ಬಂದಿದೆ.<br><br>ಕೊಡಗು ಜಿಲ್ಲೆಯಲ್ಲಿ ಹುಲಿ ದಾಳಿಯನ್ನು ತಡೆಗಟ್ಟಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ:-<br><br>1. ಹುಲಿ ಉಪಟಳ ಹೆಚ್ಚಾಗಿರುವ ಬಾಧಿತ ಪ್ರದೇಶಗಳಲ್ಲಿ ಕ್ಯಾಮರಾ ಟ್ರ್ಯಾಪ್ ಗಳನ್ನು ಅಳವಡಿಸಿ ಹುಲಿಗಳ ಚಲನ ವಲನಗಳನ್ನು ಪತ್ತೆಹಚ್ಚುವ ಕಾರ್ಯವನ್ನು ಕೈಗೊಳ್ಳಲಾಗುತ್ತಿದೆ.<br><br>2. ಪದೇ ಪದೇ ನಿರ್ದಿಷ್ಟ ಪ್ರದೇಶದಲ್ಲಿ ಹುಲಿ ದಾಳಿಯಿಂದ ಸಾಕು ಪ್ರಾಣಿಗಳ ಪ್ರಾಣ ಹಾನಿ ಸಂಭವಿಸುತ್ತಿರುವುದು ಕಂಡುಬಂದಲ್ಲಿ ಇಲಾಖಾ ಆನೆಗಳನ್ನು ಉಪಯೋಗಿಸಿಕೊಂಡು ಕೂಂಬಿಂಗ್ ಕಾರ್ಯಾಚರಣೆ ನಡೆಸಲಾಗುತ್ತಿದೆ.<br><br>3. ನುರಿತ ಇಲಾಖಾ ಸಿಬ್ಬಂದಿ ಮತ್ತು ಪರಿಣಿತರು ಒಳಗೊಂಡ ತಂಡವನ್ನು ರಚಿಸಿ ಹುಲಿಯ ಚಲನ-ವಲನಗಳನ್ನು ನಿಗಾವಹಿಸಲಾಗುತ್ತಿರುತ್ತದೆ.<br><br>4. ಉಪಟಳ ಹೆಚ್ಚಾಗಿರುವ ಪ್ರದೇಶದಲ್ಲಿ ಅಳವಡಿಸಲಾಗಿರುವ ಕ್ಯಾಮರಾ ಟ್ರ್ಯಾಪಗಳಲ್ಲಿ ಸೆರೆಸಿಕ್ಕ ಹುಲಿಯ ಛಾಯಚಿತ್ರಗಳನ್ನು ಅನುಸರಿಸಿ ಇಲಾಖೆಯಲ್ಲಿರುವ ಹುಲಿಕೋಶ ಇವರು ನೀಡಿದ ತಾಂತ್ರಿಕ ವರದಿಯನುಸಾರ ಉಪಟಳ ನೀಡುತ್ತಿರುವ ಹುಲಿಯನ್ನು ನಿರ್ದಿಷ್ಟವಾಗಿ ಗುರುತಿಸಿ ಸೆರೆಹಿಡಿಯಲಾಗುತ್ತಿದೆ.<br><br>ಇದರಂತೆ ಕಳೆದ 2 ವರ್ಷದಲ್ಲಿ ಕೊಡಗು ಜಿಲ್ಲಾ ವ್ಯಾಪ್ತಿಯಲ್ಲಿ ಈ ಕೆಳಕಂಡಂತೆ ಹುಲಿಗಳನ್ನು ಸೆರೆಹಿಡಿಯಲಾಗಿದೆ. |

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td></td><td></td><td>
• ಪೊನ್ನಂಪೇಟೆ ವಲಯ ವ್ಯಾಪ್ತಿಯ ಕುಮಟೂರು ಗ್ರಾಮದಲ್ಲಿ ದಿನಾಂಕ: 20-05-2020ರಂದು ಒಂದು ಹುಲಿಯನ್ನು ಸೆರೆಹಿಡಿಲಾಗಿರುತ್ತದೆ.<br>
• ತಿತಿಮತಿ ವಲಯ ವ್ಯಾಪ್ತಿಯ ಕುಮಟೂರು ಗ್ರಾಮದಲ್ಲಿ ದಿನಾಂಕ: 23-12-2020 ರಂದು ಒಂದು ಹುಲಿಯನ್ನು ಸೆರೆಹಿಡಿಯಲಾಗಿರುತ್ತದೆ.<br>
• ಪೊನ್ನಂಪೇಟೆ ವಲಯ ವ್ಯಾಪ್ತಿಯ ಟಿ.ಶೆಟ್ಟಿಗೇರಿ ಕುಮಟೂರು ಗ್ರಾಮದಲ್ಲಿ ದಿನಾಂಕ: 20-02-2021ರಂದು ಒಂದು ಹುಲಿಯನ್ನು ಸೆರೆಹಿಡಿಯಲಾಗಿರುತ್ತದೆ.
</td></tr>
<tr><td>ಆ)</td><td>ಕಳೆದ 03 ವರ್ಷಗಳಲ್ಲಿ ಹುಲಿ ದಾಳಿಗೆ ಕೊಡಗು ಜಿಲ್ಲೆಯಲ್ಲಿ ಎಷ್ಟು ರೈತರು/ ಸಾರ್ವಜನಿಕರು ಮರಣ ಹೊಂದಿರುತ್ತಾರೆ; (ವಿವರ ನೀಡುವುದು)</td><td rowspan="2">
ಕೊಡಗು ಜಿಲ್ಲೆಯಲ್ಲಿ ಕಳೆದ 3 ವರ್ಷಗಳಲ್ಲಿ ಹುಲಿ ದಾಳಿಯಿಂದ ಉಂಟಾದ ಮಾನವ ಪ್ರಾಣ ಹಾನಿ ಪ್ರಕರಣ ಮತ್ತು ಪಾವತಿಸಿದ ದಯಾತ್ಮಕ ಧನದ ವಿವರ ಕೆಳಕಂಡಂತಿದೆ:-
<table>
<tr><th>ವರ್ಷ</th><th>ವಿಭಾಗ</th><th>ಗ್ರಾಮ / ವಲಯ</th><th>ಮೃತರ ಹೆಸರು</th><th>ದಯಾತ್ಮಕ ಧನ (ರೂ.ಲಕ್ಷಗಳಲ್ಲಿ)</th></tr>
<tr><td>2019-20</td><td colspan="4">ಇರುವುದಿಲ್ಲ</td></tr>
<tr><td rowspan="3">2020-21</td><td rowspan="3">ವಿರಾಜಪೇಟೆ</td><td>ಕುಮಟೂರು/ ಪೊನ್ನಂಪೇಟೆ</td><td>ಎರವರ ಅಯ್ಯಪ್ಪ</td><td>7.5</td></tr>
<tr><td>ಕುಮಟೂರು/ ಪೊನ್ನಂಪೇಟೆ</td><td>ಬೋಳಕ್ಕ (ಚಿಣ್ಣಿ)</td><td>7.5</td></tr>
<tr><td>ಬೆಳ್ಳೂರು/ ಪೊನ್ನಂಪೇಟೆ</td><td>ರಂಗಸ್ವಾಮಿ</td><td>7.5</td></tr>
<tr><td>2021-22</td><td colspan="4">ಇರುವುದಿಲ್ಲ</td></tr>
</table>
</td></tr>
<tr><td>ಇ)</td><td>ಮರಣ ಹೊಂದಿದವರ ಕುಟುಂಬಕ್ಕೆ ಪರಿಹಾರ ಧನ ವಿತರಿಸಲಾಗಿದೆಯೇ; ಪರಿಹಾರ ನೀಡಿದ್ದಲ್ಲಿ ತಾಲ್ಲೂಕುವಾರು, ಫಲಾನುಭವಿಗಳ ವಿವರ ಒದಗಿಸುವುದು;</td></tr>
<tr><td>ಈ)</td><td>ಕಳೆದ 03 ವರ್ಷಗಳಲ್ಲಿ ಹುಲಿ ದಾಳಿಗೆ ಎಷ್ಟು ಸಾಕು ಪ್ರಾಣಿಗಳು (ಹಸು, ಎಮ್ಮೆ, ಕುರಿ, ಮೇಕೆ) ಸಾವನ್ನಪ್ಪಿವೆ? (ಸಂಪೂರ್ಣ ವಿವರ ನೀಡುವುದು)</td><td>
ಕೊಡಗು ಜಿಲ್ಲೆಯಲ್ಲಿ ಕಳೆದ 3 ವರ್ಷಗಳಲ್ಲಿ ಹುಲಿ ದಾಳಿಯಿಂದ ಸಾವನ್ನಪ್ಪಿದ ಸಾಕುಪ್ರಾಣಿ ಪ್ರಕರಣಗಳು ಮತ್ತು ಪಾವತಿಸಿದ ದಯಾತ್ಮಕ ಧನದ ವಿವರ ಕೆಳಕಂಡಂತಿದೆ:-
<table>
<tr><th>ವರ್ಷ</th><th>ಪ್ರಕರಣಗಳ ಸಂಖ್ಯೆ</th><th>ದಯಾತ್ಮಕ ಧನ (ರೂ.ಗಳಲ್ಲಿ)</th></tr>
<tr><td>2018-19</td><td>46</td><td>4,28,500</td></tr>
<tr><td>2019-20</td><td>55</td><td>5,70,000</td></tr>
<tr><td>2020-21</td><td>77</td><td>8,70,000</td></tr>
<tr><td>2021-22 (ಫೆಬ್ರುವರಿ ಅಂತ್ಯಕ್ಕೆ)</td><td>31</td><td>8,90,000</td></tr>
</table>
</td></tr>
</table>

ಸಂಖ್ಯೆ: ಅಪಜೀ 45 ಎಫ್‌ಡಬ್ಲ್ಯೂಎಲ್ 2022

(ಉಮೇಶ್ ವಿ. ಕತ್ತಿ)
ಅರಣ್ಯ, ಆಹಾರ, ನಾಗರಿಕ ಸರಬರಾಜು
ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು